ಶಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ
ದಿನಾಂಕ : DATE : 24/05/2019

# ಬಿಜೆಪಿಯ ರಾಜ್ಯದ ಎಲ್ಲ ಸಂಸದರಿಗೆ ಗೆಲುವು

## ಜೊತೆಗೆ 10 ಹೊಸ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಿದ ಕಮಲ | ಕಾಂಗ್ರೆಸ್ಸಿನ ಎಲ್ಲ ಘಟಾನುಘಟಿಗಳಿಗೆ ಸೋಲು!

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪ್ರಧಾನಿ ಮೋದಿ ಅವರ ಅಬ್ಬರದ ಅಲೆಗೆ ಜೆಡಿಎಸ್ ಹಾಗೂ ಕಾಂಗ್ರೆಸ್‌ನ ಬಹುತೇಕ ಹಾಲಿ ಸಂಸದರು ಕೊಚ್ಚಿ ಹೋಗಿದ್ದಾರೆ. ಇದಕ್ಕೆ ಬದಲಾಗಿ ಬಿಜೆಪಿಯ ಹಾಲಿ ಎಲ್ಲ ಸಂಸದರು ಪುನರಾಯ್ಕೆಗೊಂಡಿದ್ದಾರೆ.

15 ಹಾಲಿ ಸಂಸದರು ಗೆಲುವು ಸಾಧಿಸುವ ಜೊತೆಗೆ ಹೊಸದಾಗಿ 10 ಕ್ಷೇತ್ರಗಳಲ್ಲಿ ಕಮಲ ಅರಳಿದೆ. ಅನಂತಕುಮಾರ್ ನಿಧನದಿಂದ ಖಾಲಿ ಇದ್ದ ಬೆಂಗಳೂರು ದಕ್ಷಿಣ ಕ್ಷೇತ್ರ ಸೇರಿದಂತೆ 15 ಕ್ಷೇತ್ರಗಳು ಪುನಃ ಬಿಜೆಪಿ ತೆಕ್ಕೆಗೆ ಹೋಗಿವೆ. ಜೊತೆಗೆ ಹೊಸದಾಗಿ 10 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. 10 ಸಂಸದರನ್ನು ಹೊಂದಿದ್ದ ಕಾಂಗ್ರೆಸ್ ತುಮಕೂರು ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿತ್ತು. ಉಳಿದ ಒಂಬತ್ತು ಕ್ಷೇತ್ರಗಳ ಪೈಕಿ ಎಂಟು ಕ್ಷೇತ್ರಗಳಲ್ಲಿ ಪರಾಭವಗೊಂಡಿದ್ದು, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದರನ್ನು ಮಾತ್ರ ಪುನಃ ಜನರು ಕೈ ಹಿಡಿದಿದ್ದಾರೆ. ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದ ತುಮಕೂರು ಬಿಜೆಪಿ ಪಾಲಿಗೆ ಹೋಗಿದೆ. ಇನ್ನು ಜೆಡಿಎಸ್ ವಶದಲ್ಲಿದ್ದ ಮಂಡ್ಯ ಕ್ಷೇತ್ರ ಪಕ್ಷೇತರ ಅಭ್ಯರ್ಥಿ ಪಾಲಾಗಿದೆ.

**ಖರ್ಗೆ, ಮುನಿಯಪ್ಪ, ಮೊಯ್ಲಿ ಸೋಲು:** 45 ವರ್ಷಕ್ಕಿಂತ ಹೆಚ್ಚು ಕಾಲ ಶಾಸಕ, ಸಂಸದರಾಗಿದ್ದ ಮಲ್ಲಿಕಾರ್ಜುನ ಖರ್ಗೆ ತಮ್ಮ ಶಿಷ್ಯ ಉಮೇಶ್ ಜಾಧವ್ ಅವರಿಂದ ಪರಾಭವಗೊಂಡಿದ್ದಾರೆ. ಅದೇ ರೀತಿ 7 ಬಾರಿ ನಿರಂತರವಾಗಿ ಸಂಸದರಾಗಿದ್ದ ಕೆ.ಎಚ್. ಮುನಿಯಪ್ಪ ಅವರಿಗೆ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯ ಮುನಿಸ್ವಾಮಿ ಅವರು ಸೋಲಿನ ರುಚಿ ಉಣಿಸಿದ್ದಾರೆ. ಪುನರಾಯ್ಕೆ ವಿಶ್ವಾಸ ಹೊಂದಿದ್ದ ವೀರಪ್ಪ ಮೊಯ್ಲಿ ಅವರಿಗೆ ಮತದಾರರು ಕೈ ಹಿಡಿದಿಲ್ಲ. ಬಳ್ಳಾರಿ ಕ್ಷೇತ್ರದಲ್ಲಿ ಕೆಲವೇ ತಿಂಗಳ ಹಿಂದೆ ಎರಡು ಲಕ್ಷಕ್ಕಿಂತ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದ ವಿ.ಎಸ್. ಉಗ್ರಪ್ಪ ಅವರು ಸೋತಿದ್ದಾರೆ.

**ಮಾನ ಉಳಿಸಿದ ಸಂಸದರು:** ಕಾಂಗ್ರೆಸ್‌ನಲ್ಲಿ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸಂಸದ ಡಿ.ಕೆ. ಸುರೇಶ್ ಮಾತ್ರ ಗೆಲ್ಲುವ ಮೂಲಕ ರಾಜ್ಯದ ಕಾಂಗ್ರೆಸ್ ಮಾನ ಉಳಿಸಿದ್ದಾರೆ.

### ಗೆದ್ದ ಬಿಜೆಪಿ ಹಾಲಿ ಸಂಸದರು

- ಪಿ.ಸಿ. ಗದ್ದಿಗೌಡರ್ (ಬಾಗಲಕೋಟೆ)
- ಪಿ.ಸಿ. ಮೋಹನ್ (ಬೆಂಗಳೂರು ಕೇಂದ್ರ)
- ಡಿ.ವಿ. ಸದಾನಂದಗೌಡ (ಬೆಂ ಉತ್ತರ)
- ಸುರೇಶ್ ಅಂಗಡಿ (ಬೆಳಗಾವಿ)
- ಭಗವಂತ ಖೂಬಾ (ಬೀದರ್)
- ರಮೇಶ್ ಜಿಗಜಿಣಗಿ (ವಿಜಯಪುರ)
- ನಳಿನ್ ಕುಮಾರ್ ಕಟೀಲ್ (ದಕ್ಷಿಣ ಕನ್ನಡ)
- ಶೋಭಾ (ಉಡುಪಿ- ಚಿಕ್ಕಮಗಳೂರು)
- ಜಿ.ಎಂ. ಸಿದ್ದೇಶ್ವರ್ (ದಾವಣಗೆರೆ)
- ಪ್ರಹ್ಲಾದ್ ಜೋಶಿ (ಧಾರವಾಡ)
- ಶಿವಕುಮಾರ್ ಉದಾಸಿ (ಹಾವೇರಿ)
- ಕರಡಿ ಸಂಗಣ್ಣ (ಕೊಪ್ಪಳ)
- ಬಿ.ವೈ. ರಾಘವೇಂದ್ರ, (ಶಿವಮೊಗ್ಗ)
- ಅನಂತಕುಮಾರ್ ಹೆಗಡೆ (ಉತ್ತರ ಕನ್ನಡ)
- ಪ್ರತಾಪ್ ಸಿಂಹ (ಮೈಸೂರು--ಕೊಡಗು)

### ಸೋತ ಕಾಂಗ್ರೆಸ್ ಸಂಸದರು

- ಮಲ್ಲಿಕಾರ್ಜುನ ಖರ್ಗೆ (ಕಲಬುರಗಿ)
- ಕೆ.ಎಚ್. ಮುನಿಯಪ್ಪ (ಕೋಲಾರ)
- ವೀರಪ್ಪ ಮೊಯ್ಲಿ (ಚಿಕ್ಕಬಳ್ಳಾಪುರ)
- ವಿ.ಎಸ್. ಉಗ್ರಪ್ಪ (ಬಳ್ಳಾರಿ)
- ಪ್ರಕಾಶ್ ಹುಕ್ಕೇರಿ (ಚಿಕ್ಕೋಡಿ)
- ಬಿ.ಎನ್. ಚಂದ್ರಪ್ಪ (ಚಿತ್ರದುರ್ಗ)
- ಬಿ.ವಿ. ನಾಯಕ್ (ರಾಯಚೂರು)
- ಧ್ರುವನಾರಾಯಣ (ಚಾಮರಾಜನಗರ)

# ಕಾಂಗ್ರೆಸ್‌ನ ಎಲ್ಲ ಸಚಿವರಿಗೆ ಮುಖಭಂಗ

## ಡಿಕೆಸು ಗೆಲ್ಲಿಸುವಲ್ಲಿ ಶಿವಕುಮಾರ್ ಯಶಸ್ವಿ | ತಂದೆ ಗೆಲ್ಲಿಸುವಲ್ಲಿ ಪ್ರಿಯಾಂಕ್ ವಿಫಲ

ಬೆಂಗಳೂರು: 17ನೇ ಲೋಕಸಭಾ ಚುನಾವಣೆಯಲ್ಲಿ ವಿವಿಧ ಜಿಲ್ಲೆಗಳ ಉಸ್ತುವಾರಿ ಹೊತ್ತಿದ್ದ ಬಹುತೇಕ ಎಲ್ಲ ಕಾಂಗ್ರೆಸ್ ಸಚಿವರು ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ಸೋತಿದ್ದು, ಬಿಜೆಪಿ ಎದುರು ತೀವ್ರ ಮುಖಭಂಗ ಅನುಭವಿಸಿದ್ದಾರೆ. ಈ ನಡುವೆ ಸಚಿವ ಡಿ.ಕೆ.ಶಿವಕುಮಾರ್ ಮಾತ್ರ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ತಮ್ಮ ಸಹೋದರ ಡಿ.ಕೆ. ಸುರೇಶ್ ಅವರನ್ನು ಗೆಲ್ಲಿಸುವಲ್ಲಿ ಯಶಸ್ವಿಯಾಗಿದ್ದು ಬಿಟ್ಟರೆ ಮತ್ತೆಲ್ಲ ಸಚಿವರು ತೀವ್ರ ಮುಜುಗರಕ್ಕೆ ಒಳಗಾಗಿದ್ದಾರೆ.

ಕಳೆದ ಚುನಾವಣೆಯಲ್ಲಿ ಪ್ರತಿಪಕ್ಷ ಸ್ಥಾನವನ್ನೂ ಸಹ ಪಡೆಯಲು ವಿಫಲವಾಗಿದ್ದ ಕಾಂಗ್ರೆಸ್‌ಗೆ ಸಂಸತ್ತಿನಲ್ಲಿ ನಾಯಕನಾಗಿ ಇದ್ದಂತೆ ಕೇವಲ 44 ಸಂಸದರೊಂದಿಗೆ ಸಮರ್ಥವಾಗಿ ಮುನ್ನಡೆಸಿದ್ದ ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಸೋಲು ಪಕ್ಷಕ್ಕೆ ದೊಡ್ಡ ಹೊಡೆತ ನೀಡಿದೆ. ಸ್ವತಃ ಅವರ ಪುತ್ರ ಪ್ರಿಯಾಂಕ ಖರ್ಗೆಯೇ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ತಮ್ಮ ತಂದೆಯನ್ನು ಗೆಲ್ಲಿಸಿಕೊಂಡು ಬರುವಲ್ಲಿ ವಿಫಲರಾಗಿದ್ದಾರೆ.

ಚಿಕ್ಕಬಳ್ಳಾಪುರದ ಕಾಂಗ್ರೆಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಬಿಜೆಪಿ ಅಭ್ಯರ್ಥಿ ಬಚ್ಚೇಗೌಡ ವಿರುದ್ಧ ಸೋತಿದ್ದು, ಅಲ್ಲಿನ


ಎಡ್ಡಕೆ ಕೇಂದ್ರ ಸಚಿವ ಕೃಷ್ಣಬೈರೇಗೌಡ

ಉಸ್ತುವಾರಿ ಸಚಿವ ಎಚ್.ಎನ್.ಶಿವಶಂಕರ ರೆಡ್ಡಿ ಮೈತ್ರಿ ಪಕ್ಷಗಳ ಮುಖಂಡರನ್ನು ಒಗ್ಗೂಡಿಸಿ ಹೋರಾಟ ನಡೆಸುವಲ್ಲಿ ವಿಫಲರಾಗಿದ್ದೇ ಸೋಲಿಗೆ ಕಾರಣವೆನ್ನಲಾಗಿದೆ. ಈ ಹಿಂದೆ ಬಳ್ಳಾರಿ ಉಪಚುನಾವಣೆಯಲ್ಲಿ ಉಗ್ರಪ್ಪ ಅವರನ್ನು ಲಕ್ಷಕ್ಕೂ ಅಧಿಕ ಮತಗಳಿಂದ ಗೆಲ್ಲಿಸಿಕೊಂಡು ಬಂದು ಬೀಗಿದ್ದ ಡಿ.ಕೆ.ಶಿವಕುಮಾರ್ ಈ ಚುನಾವಣೆಯಲ್ಲಿ ಉಗ್ರಪ್ಪ ಅವರನ್ನು ಗೆಲ್ಲಿಸಲು ಸಾಧ್ಯವಾಗಿಲ್ಲ.

ಉಡುಪಿ-ಚಿಕ್ಕಮಗಳೂರು ಕ್ಷೇತ್ರದಲ್ಲಿ ಹಾಲಿ ಸಂಸದೆ ಶೋಭಾ ಕರಂದ್ಲಾಜೆ ವಿರೋಧಿ ಅಲೆ ಇದ್ದರೂ ಜಿಲ್ಲಾ ಉಸ್ತುವಾರಿ ವಹಿಸಿದ್ದ ಕಾಂಗ್ರೆಸ್ ಸಚಿವೆ ಜಯಮಾಲಾ ಮೈತ್ರಿ ಅಭ್ಯರ್ಥಿ ಪ್ರಮೋದ್ ಮಧ್ವರಾಜ್ ಅವರನ್ನು ಗೆಲ್ಲಿಸಿಕೊಂಡು ಬರಲು ಸಾಧ್ಯವಾಗಲಿಲ್ಲ. ದಕ್ಷಿಣ ಕನ್ನಡದ ಉಸ್ತುವಾರಿ ಸಚಿವ ಯು.ಟಿ.ಖಾದರ್, ಹಾವೇರಿ ಉಸ್ತುವಾರಿ ಸಚಿವ ಜಮೀರ್ ಅಹಮದ್, ಚಿಕ್ಕಬಳ್ಳಾಪುರದ ಉಸ್ತುವಾರಿ ಎನ್.ಎಚ್.ಶಿವಶಂಕರ ರೆಡ್ಡಿ, ಶಿವಾನಂದ ಪಾಟೀಲ್, ತುಮಕೂರು ಉಸ್ತುವಾರಿ ಡಾ.ಜಿ.ಪರಮೇಶ್ವರ್, ವಿಜಯಪುರ ಉಸ್ತುವಾರಿ ಹೊತ್ತಿದ್ದ ಗೃಹಸಚಿವ ಎಂ.ಬಿ.ಪಾಟೀಲ್ ಮೈತ್ರಿ ಅಭ್ಯರ್ಥಿ ಸುನೀತಾ ಚೌವ್ಹಾಣ್ ಗೆಲ್ಲಿಸುವಲ್ಲಿ ಸೋತಿದ್ದಾರೆ.